**- 05 -**

**ದಿನಾಂಕ 16-02-2026 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**<u>ಪಾಟೀ ಸವಾಲು:-</u>** ವಾದಿ ಪರ ಶ್ರೀ ಬಿ.ಎಸ್. ವಕೀಲರಿಂದ.

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಜಮೀನನ್ನು ಖರೀದಿಸಿರುತ್ತೇವೆ ಎಂದು ನಮೂಧಿಸಿರುತ್ತೇನೆ. ಸದರಿ ಜಮೀನನ್ನು ಯಾರಿಂದ ಖರೀದಿಸಲಾಗಿದೆ ನನಗೆ ಗೊತ್ತಿಲ್ಲ. ಯಾವ ದಿನಾಂಕದಂದು ಜಮೀನನ್ನು ಖರೀದಿ ಮಾಡಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಖರೀದಿ ಮಾಡಿದ ಜಮೀನು ಸರ್ವೆ ನಂ.24 ಆಗಿರುತ್ತದೆ. ಸದರಿ ಜಮೀನು ಚಿಕ್ಕಹೋನ್ನಕುಣಿ ಗ್ರಾಮದ ವ್ಯಾಪ್ತಿಯಲ್ಲಿ ಬರುತ್ತದೆ. ಸದರಿ ಜಮೀನನ್ನು 1 ಲಕ್ಷ 60 ಸಾವಿರ ರೂ ಗಳಿಗೆ ಖರೀದಿಸಲಾಗಿದೆ. ಖರೀದಿ ಸಂದರ್ಭದಲ್ಲಿ ನಾನು ಇರಲಿಲ್ಲ. ನನ್ನ ಗಂಡ ಹನುಮಂತಾ ತಂದೆ ನಿಂಗಪ್ಪ ಜಮೀನನ್ನು ಖರೀದಿಸಿರುತ್ತಾನೆ. ಖರೀದಿ ಪತ್ರ ನೊಂದಣಿ ಆದ ಬಗ್ಗೆ ನನಗೆ ಗೊತ್ತಿರುವುದಿಲ್ಲ, ನನ್ನ ಗಂಡನ ಮರಣಾ ನಂತರ ಖರೀದಿ ಮಾಡಿಕೊಡುವಂತೆ ಕೇಳಿದಾಗ ತಕರಾರರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಗಂಡ 12 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾನೆ. ನಾನು ಜಮೀನು ನನ್ನ ಹೆಸರಿಗೆ ಮಾಡಿಕೊಡುವಂತೆ 8 ವರ್ಷಗಳ ಹಿಂದೆ ಕೇಳಿರುತ್ತೇನೆ. ಸದರಿ ಜಮೀನು ನನ್ನ ಹೆಸರಿಗೆ ಮಾಡುವಂತೆ ಕೇಳಿದಾಗ ಸದರಿ ಜಮೀನಿನ ಪಹಣಿಯಲ್ಲಿ ಯಾರ ಹೆಸರು ಇತ್ತು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಗಂಡನ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಈಗಲೂ ಖರೀದಿಸಿದ ಜಮೀನು ನನ್ನ ಗಂಡನ ಹೆಸರಿನಲ್ಲಿ ಇರುತ್ತದೆ.

ನನ್ನ ಗಂಡ ತೀರಿದ ನಂತರ ಖರೀದಿಸಿದ ಜಮೀನನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಅಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಹೆಸರಿಗೆ ಮಾಡಿಕೊಂಡಿದ್ದರಿಂದ ತಕರಾರು ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಕರಾರು ಪತ್ರದ ಸ್ಟಾಂಪನ್ನು ಯಾವ ದಿನಾಂಕದಂದು ಖರೀದಿಸಲಾಗಿದೆ ನನಗೆ ಗೊತ್ತಿಲ್ಲ. ಯಾವ ದಿನಾಂಕದಂದು ಕರಾರು ಪತ್ರವನ್ನು ಬರೆಯಲಾಗಿದೆ ಎಂಬುವುದು ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ಕರಾರು ಪತ್ರದ ಸ್ಟಾಂಪನ್ನು ದಿ.18-04-2006 ರಂದು ಖರೀದಿಸಲಾಗಿದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರದಲ್ಲಿ ಕರಾರು ಪತ್ರ ದಿ.20-07-2005 ರಂದು ಬರೆದಿರುವಂತೆ ನಮೂಧಿಸಲಾಗಿದೆ ಅಂದರೆ ನನಗೆ ಗೊತ್ತಿಲ್ಲ.

ಸದರಿ ಕರಾರು ಪತ್ರದಲ್ಲಿ ದಿ.19-04-2004 ರಂದು ಇನ್ನುಳಿದ ರೂ.20,000/- ಗಳನ್ನು ಮುಟ್ಟಿರುತ್ತವೆ ಎಂದು ನಿಡಿ-6 ರ ಕರಾರು ಪತ್ರದಲ್ಲಿ ನಮೂಧಿಸಲಾಗಿದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರವನ್ನು ಯಾರು ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರವನ್ನು ಶಾಂತಮ್ಮ ಜಮೀನನ್ನು ಖರೀದಿ ಕೊಟ್ಟಂತೆ ಬರೆಯಲಾಗಿದ್ದು, ಸದರಿ ದಿನಾಂಕದಂದು ಜಮೀನು ಶಾಂತಮ್ಮಳ ಹೆಸರಿನಲ್ಲಿ ಇರಲಿಲ್ಲ ಅಂದರೆ ನನಗೆ ಗೊತ್ತಿಲ್ಲ.

ವಾದಿ ಸಾಬಣ್ಣನ ಹೆಸರಿನಲ್ಲಿ ಜಮೀನು ಇತ್ತು ಅಂದರೆ ಸರಿಯಲ್ಲ. ಶಾಂತಮ್ಮಳ ಹೆಸರಿನಲ್ಲಿ ಜಮೀನು ಇದ್ದು, ಅವಳೆ ಜಮೀನನ್ನು ಮಾರಾಟ ಮಾಡಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಶಾಂತಮ್ಮ ಮತ್ತು ಶಾಂತಮ್ಮಳ ಮಕ್ಕಳಾದ ಸಾಬಣ್ಣ ಮತ್ತು ಮಲ್ಲಪ್ಪ ಜಮೀನನ್ನು ಮಾರಾಟ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಸದರಿ ಅವರು ಯಾವುದೇ ಕರಾರು ಪತ್ರವನ್ನು ಸಹಿ ಮಾಡಿ ಬರೆದುಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ದಾವಾ ಜಮೀನನ್ನು ಕಬಳಿಸುವ ಉದ್ದೇಶದಿಂದ ನಿಡಿ-6 ಅನ್ನು ಖೊಟ್ಟಿಯಾಗಿ ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ನಿಡಿ-6 ರಲ್ಲಿ ಇರುವ ಸಹಿಗಳು ಶಾಂತಮ್ಮ ಮತ್ತು ಅವರ ಮಕ್ಕಳಾದ ಸಾಬಣ್ಣ ಮತ್ತು ಮಲ್ಲಪ್ಪ ಸಹಿಗಳು ಆಗಿರುವುದಿಲ್ಲ ಅಂದರೆ ಸರಿಯಲ್ಲ.

ಈ ಮೊದಲು ವಾದಿ ಸಾಬಣ್ಣನ ಪರವಾಗಿ ನ್ಯಾಯಾಲಯ ತೀರ್ಪು ನೀಡಿದ್ದು, ಅದನ್ನು ಪ್ರಶ್ನಿಸಿ ರಾಯಚೂರು ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿತ್ತು ಅಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಜಮೀನು ಕುರಿತಾಗಿ ಕರಾರು ಪತ್ರ ಬರೆದುಕೊಟ್ಟಿರುವ ಸಂಗತಿಯನ್ನು ನಮೂಧಿಸಿರುತ್ತೇನೆ. ಸದರಿ ಮೇಲ್ಮನವಿಯಲ್ಲಿ ಕರಾರು ಪತ್ರ ಬಗ್ಗೆ ನಮೂಧಿಸಿರುವುದಿಲ್ಲ ಅಂದರೆ ಸರಿಯಲ್ಲ. ಸದರಿ ಮೇಲ್ಮನವಿಯಲ್ಲಿ ನನ್ನ ಗಂಡನ ಹೆಸರು ಕುಟುಂಬ ವಿಭಾಗ ಪತ್ರದ ಆಧಾರದ ಮೇಲೆ ಮುಟೇಷನ್ ಆಗಿರುತ್ತದೆ ಎಂದು ಉಲ್ಲೇಖಿಸಿರುತ್ತೇನೆ ಅಂದರೆ ನನಗೆ ಗೊತ್ತಿರುವುದಿಲ್ಲ. ಮೇಲ್ಮನವಿಯಲ್ಲಿ ವಿಭಾಗ ಪತ್ರದ ಆಧಾರದ ಮೇಲೆ ಮುಟೇಷನ್ ಆಗಿರುತ್ತದೆ ಎಂದು ಸುಳ್ಳಾಗಿ ನಮೂಧಿಸಿರುತ್ತೇನೆ ಅಂದರೆ ಸರಿಯಲ್ಲ.

ಸಾಬಣ್ಣನ ತಂದೆಯ ಹೆಸರು ಭೀಮಣ್ಣ ಎಂದು ಇರುತ್ತದೆ ಭೀಮಣ್ಣನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಭೀಮಣ್ಣನಿಗೆ ಶಿವನಮ್ಮ, ಮಲ್ಲಪ್ಪ ಮತ್ತು ಸಾಬಣ್ಣ ಎಂದು 3 ಜನ ಮಕ್ಕಳು ಇರುತ್ತಾರೆ. 1997 ರಲ್ಲಿ ಭೀಮಣ್ಣನ ಕುಟುಂಬದಲ್ಲಿ ಭೀಮಣ್ಣನ ಮರಣಾ ನಂತರ

ವಿಭಾಗ ಆಗಿರುತ್ತದೆ ಅಂದರೆ ಸರಿ. ಸದರಿ ವಿಭಾಗದಲ್ಲಿ ಸರ್ವೆ ನಂ.24 ರಲ್ಲಿ 05 ಎಕರೆ 23 ಗುಂಟೆ ಸಾಬಣ್ಣನ ಭಾಗಕ್ಕೆ ಬಂದಿರುತ್ತದೆ ಅಂದರೆ ಸರಿ. ಸದರಿ ವಿಭಾಗದ ಸಂದರ್ಭದಲ್ಲಿ ವಾದಿ ಸಾಬಣ್ಣ ಅಲ್ಪವಹಿ ಅಗಿದ್ದರಿಂದ ಸದರಿ ಜಮೀನನ್ನು ಸಾಬಣ್ಣನ ತಾಯಿ ಸಂರಕ್ಷಣಾದಾರಳು ಎಂದು ಮುಟೇಷನ್ ಆಗಿರತ್ತದೆ ಅಂದರೆ ಸರಿ. 2006 ರಲ್ಲಿ ಸದರಿ 05 ಎಕರೆ 23 ಗುಂಟೆಯಲ್ಲಿ ತನ್ನ ಭಾಗಕ್ಕೆ 02 ಎಕರೆ ಬಂದಿರುತ್ತದೆ ಎಂದು ಸುಳ್ಳು ಮಾಹಿತಿ ನೀಡಿ ತನ್ನ ಹೆಸರಿಗೆ ಮುಟೇಷನ್ ಮಾಡಿಸಿಕೊಂಡಿರುತ್ತಾನೆ ಅಂದರೆ ಸಾಕ್ಷಿ ಖರೀದಿ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಗಂಡ ಕುಟುಂಬ ವಿಭಾಗದಲ್ಲಿ 02 ಎಕರೆ ಬಂದಿರುತ್ತದೆ ಎಂದು ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿ ಸಾಬಣ್ಣನಿಗೆ ತಿಳಿಯದಂತೆ ನನ್ನ ಗಂಡ ಮುಟೇಷನ್ ಮಾಡಿಸಿಕೊಂಡಿರುತ್ತಾನೆ ಅಂದರೆ ಸರಿಯಲ್ಲ. ನನ್ನ ಗಂಡನ ಮರಣಾ ನಂತರ 2019 ರಲ್ಲಿ ವಾರಸುದಾರಳು ಎಂದು ತಪ್ಪು ಮಾಹಿತಿ ನೀಡಿ ನನ್ನ ಹೆಸರಿಗೆ ಮುಟೇಷನ್ ಮಾಡಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ನಮ್ಮ ಮತ್ತು ಸಾಬಣ್ಣನ ಕುಟುಂಬದ ನಡುವೆ ವಿಭಾಗ ಆಗಿರುವುದಿಲ್ಲ ಅಂದರೆ ಸರಿಯಲ್ಲ. ಸದರಿ ದಾವಾ ಜಮೀನಿಗೆ ಮತ್ತು ವಾದಿ ಕುಟುಂಬಕ್ಕೆ ನಾವು ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ ಅಂದರೆ ಸರಿಯಲ್ಲ. ಭೀಮಣ್ಣನ ಮರಣಾ ನಂತರ ವಿಭಾಗ ವಾದಾಗಿನಿಂದ ಸಾಬಣ್ಣ ದಾವಾ ಜಮೀನಿನ ಮಾಲೀಕ ಮತ್ತು ಕಬ್ಜೆದಾರನಾಗಿರುತ್ತಾನೆ ಅಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ಮೊದಲು ನನ್ನ ಗಂಡ ಆತನ ಮರಣಾ ನಂತರ ನಾನು ದಾವಾ ಜಮೀನಿನ ಸ್ವಾಧಿನಾನುಭದಲ್ಲಿ ಇರುತ್ತೇನೆ ಎಂದು ಸುಳ್ಳು ಹೇಳುತ್ತಿದ್ಧೇನೆ ಅಂದರೆ ಸರಿಯಲ್ಲ.

ದಾವಾ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.